

# ಪತಿಯೇ ವಿಗ್‌ನೇಶ್ವರ

■ ಮಣ್ಣೆ ರಾಜು
ಕಲೆ: ಎನ್.ಆರ್. ಬಡಿಗೇರ

ಗಂಡನ ಕೂದಲು ಉಳಿಸಲು ಸುಮಿ ಪಟ್ಟ ಕಷ್ಟ, ಕೇಳಿದ ಹೀಯಾಳಿಕೆ ಮಾತು ಅಷ್ಟಿಷ್ಟಲ್ಲ. ಪ್ರಯತ್ನಗಳೆಲ್ಲ ವಿಫಲವಾದಾಗ ಬೋಳು ತಲೆಯನ್ನೇ ತನ್ನ ಲಾಭಕ್ಕೆ ಬಳಸಿಕೊಳ್ಳುವ ಉಪಾಯ ಕಂಡುಕೊಂಡಳು. ತಕ್ಷಣಕ್ಕೆ ಕನ್ನಡಿ ಸಿಗದಿದ್ದರೆ ಅವಳೀಗ ಗಂಡನ ಮಿಂಚುವ ತಲೆಯಲ್ಲಿ ಇಣುಕಿ ತನ್ನ ಮುಖದ ಮೇಕಪ್ ಸರಿ ಮಾಡಿಕೊಳ್ಳುತ್ತಾಳೆ. ಗಂಡನಿಗೆ ಏನಾದರೂ ಬೇಡಿಕೆ ಸಲ್ಲಿಸುವಾಗ ಅವನ ತಲೆ ಸವರಿ ಈಡೇರಿಸಿಕೊಳ್ಳುತ್ತಾಳೆ.